ಸಂಪುಟ 01 | ಸಂಚಿಕೆ 77 | ಶುಕ್ರವಾರ 30 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಶಹೀದ್ ದಿನ / Martyrs' Day

ಭಾರತದಲ್ಲಿ ಪ್ರತಿ ವರ್ಷ ಜನವರಿ 30ರಂದು ಶಹೀದ್ ದಿನ (Martyrs' Day) ಆಚರಿಸಲಾಗುತ್ತದೆ. ಈ ದಿನವನ್ನು ಮಹಾತ್ಮಾ ಗಾಂಧೀಜಿಯವರ ಪುಣ್ಯಸ್ಮರಣಾರ್ಥವಾಗಿ ಆಚರಿಸಲಾಗುತ್ತದೆ, ಏಕೆಂದರೆ ಅವರು 1948ರ ಜನವರಿ 30ರಂದು ಹತ್ಯೆಯಾಗಿದ್ದರು.

2) ವಿಶ್ವ ಕುಷ್ಠರೋಗ ದಿನ

ವಿಶ್ವ ಕುಷ್ಠರೋಗ ದಿನವನ್ನು ಆಚರಿಸುವ ಉದ್ದೇಶವು ರೋಗವು ಒಂದು ರೀತಿಯ ಬ್ಯಾಕ್ಟೀರಿಯಾದಿಂದ ಹರಡುವ ರೋಗ ಮತ್ತು ಇದನ್ನು ಸುಲಭವಾಗಿ ಗುಣಪಡಿಸಬಹುದು ಎಂದು ಸಾಮಾನ್ಯ ಸಮುದಾಯಕ್ಕೆ ಅರಿವು ಮೂಡಿಸುವ ಮೂಲಕ ರೋಗಕ್ಕೆ ಅಂಟಿಕೊಂಡಿರುವ ಕಳಂಕದ ವಿರುದ್ಧ ಜಾಗೃತಿ ಮೂಡಿಸಲು ಆಚರಿಸುತ್ತಾರೆ

## ಸುಭಾಷಿತ

**ಗುಣಾತ್ಮಕವಾಗಿ ಯೋಚಿಸುವುದಿಲ್ಲ ಎಂದಾದಲ್ಲಿ ನೀವು ಕನಿಷ್ಠ ಪಕ್ಷ ಸುಮ್ಮನಾದರೂ ಇರಿ.**

-ಜೋಯೆಲ್ ಆಸ್ಟಿನ್

## ಫೆ.06ರಂದು ಶ್ವಾನಗಳ ಪ್ರದರ್ಶನ

ನೈಜ್ಯ ದೆಸೆ ನ್ಯೂಸ್

ರಾಯಚೂರು ಜನವರಿ 29 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರಾಣಿದಯಾ ಸಂಘ,ಕೃ.ವಿ.ವಿ,ಪಶುಪಾಲನಾ ಇಲಾಖೆ ಹಾಗೂ ಕರ್ನಾಟಕ ಪಶುವೈದ್ಯಕೀಯ ಸಂಘ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನಲ್ಲಿ ಫೆ.06ರಂದು ನಗರದ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಆವರಣದಲ್ಲಿ ಶ್ವಾನಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ನಾಗರಿಕರು ಹಾಗೂ ಶ್ವಾನ ಪ್ರಿಯರು ಭಾಗವಹಿಸುವಂತೆ ಕೋರಲಾಗಿದೆ.ಉಚಿತವಾಗಿ ರೇಬೀಸ್ ಲಸಿಕೆಯನ್ನು ಹಾಕಲಾಗುವುದು ಎಂದು ಪಶುಪಾಲನಾ ಇಲಾಖೆ ಇಲಾಖೆಯ ಉಪನಿರ್ದೇಶಕರಾದ ಡಾ.ಪೋಮಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಜಿ.ಪಂ ಸಿಇಓ ಚಾಲನೆ ಗ್ರಾಮ ಪಂಚಾಯತ ಮಟ್ಟದಿಂದ ಸರಿಯಾದ ಮಾಹಿತಿ ನೀಡಿ: ಈಶ್ವರ ಕುಮಾರ್

ನೈಜ್ಯ ದೆಸೆ ನ್ಯೂಸ್





ರಾಯಚೂರು ಜನವರಿ 29 (ಕರ್ನಾಟಕ ವಾರ್ತೆ): ಜಿಲ್ಲಾ ಮಾನವ ಅಭಿವೃದ್ಧಿ-2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ-2031ರವರೆಗೆ ವರದಿ ತಯಾರಿಕೆಗೆ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ವರದಿ ತಯಾರಿಕೆಗಾಗಿ ಜಿಲ್ಲೆಯ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಿಂದ ಸರಿಯಾದ ಮಾಹಿತಿಯನ್ನು ನೀಡಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು. ಜನವರಿ 29ರ ಗುರುವಾರ ದಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ-2031 ವರದಿಗಳ ತಯಾರಿಕೆ ಕುರಿತು ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ರಾಯಚೂರು ಜಿಲ್ಲೆಯು ಮಹತ್ವಾಕಾಂಕ್ಷೆ ಜಿಲ್ಲೆಯಾಗಿದೆ. ಅಲ್ಲದೆ ಇಲ್ಲಿನ ಎರಡು ತಾಲೂಕುಗಳು ಬ್ಲಾಕ್ ಮಹತ್ವಾಕಾಂಕ್ಷೆ ಜಿಲ್ಲೆಯಾಗಿದ್ದು, ಜಿಲ್ಲೆಯಲ್ಲಿನ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಫಲಿತಾಂಶ, ಆರೋಗ್ಯ, ಕೃಷಿ ಕ್ಷೇತ್ರ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಹೇಗೆ ವರದಿಯನ್ನು ತಯಾರಿಸಬೇಕೆಂದು ತರಬೇತಿ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗುತ್ತದೆ. ಎಲ್ಲಾ ಅಧಿಕಾರಿಗಳು ಸರಿಯಾಗಿ ತಿಳಿದುಕೊಳ್ಳಬೇಕು ಎಂದರು. ಮಾಹಿತಿ ನೀಡುವ ಸಂಬಂಧದಲ್ಲಿ ಕೆಳಮಟ್ಟದ ಅಧಿಕಾರಿ ನೀಡುವ ಮಾಹಿತಿಯನ್ನು ಕ್ರಾಸ್ ಚೆಕ್ ಮಾಡಬೇಕು.ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಜಿಲ್ಲೆಯ ಜನರ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಆದಾಯದಂತಹ ಅಂಶಗಳನ್ನು ಅಳೆಯಲು ಬಹಳ ಮುಖ್ಯವಾದ ವರದಿಯಾಗಿದ್ದು, ಎಲ್ಲಾ ಇಲಾಖೆ ಅಧಿಕಾರಿಗಳು ವರದಿ ತಯಾರಿಕೆ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಂದ ಸೂಚಿಸಿದರು.ಈ ವೇಳೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಿರಿಯ ನಿರ್ದೇಶಕ ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ನಿರ್ದೇಶಕ ಬಸವರಾಜು ಎಸ್. ಮಾತನಾಡಿ, ಜಿಲ್ಲೆಗಳ ಮಾನವ ಅಭಿವೃದ್ಧಿ 2025 ಸಿದ್ಧಪಡಿಸಲು ಎಲ್ಲಾ 31 ಜಿಲ್ಲೆಗಳಲ್ಲಿಯೂ ತರಬೇತಿ ನಡೆಸಲಾಗುವುದು. ಆರೋಗ್ಯ, ಶಿಕ್ಷಣ ಹಾಗೂ ಜನಗಳ ಜೀವನ ಮಟ್ಟದ ಮೇಲೆ ಅಭಿವೃದ್ಧಿಯ ಅಂಶಗಳು ಒಳಪಟ್ಟಿದೆ. 2015ರ ನಂತರ ಈ ಕುರಿತು ವರದಿ ಮಂಡನೆಯಾಗಿಲ್ಲ. ವಿವಿಧ ಮುಖ್ಯ ಇಲಾಖೆಗಳ ಜೊತೆಗೂಡಿ ಈ ವರದಿಯನ್ನು ತಯಾರಿಸಲು ಸಹಕರಿಸಬೇಕು ಎಂದು ಕೋರಿದರು.ರಾಜ್ಯ ಸರ್ಕಾರದ ಗ್ಯಾರೆಂಟಿ ಯೋಜನೆಗಳು ಜನಸಾಮಾನ್ಯರ ಮೇಲೆ ಬೀರಿರುವ ಪ್ರಭಾವ, ಜಿಲ್ಲೆ ಅಳವಡಿಸಿಕೊಂಡಿರುವ ಉತ್ತಮ ಅಭ್ಯಾಸಗಳು, ಇತರ ಜಿಲ್ಲೆಗಳಿಂದ ತೆಗೆದುಕೊಳ್ಳಬಹುದಾದ ಒಳ್ಳೆಯ ಮಾದರಿಗಳು ಸಹ ಅಭಿವೃದ್ಧಿ ದೃಷ್ಟಿಯಿಂದ ಮುಖ್ಯವೆನಿಸಿವೆ. ಆದ್ಯಾಗಿಯೂ ಲಿಂಗ ತಾರತಮ್ಯ, ನಿರುದ್ಯೋಗ, ಬಡತನ ಜನರನ್ನು ಕಾಡುತ್ತಿದೆ. ಈ ವರದಿ ಸಲ್ಲಿಸುವ ಕುರಿತು ಜಿಲ್ಲಾ ಮಟ್ಟದಲ್ಲಿಯೂ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತ ಸಿಇಒ ನೇತೃತ್ವದಲ್ಲಿ ಸಮಿತಿ ಸಹ ರಚಿಸಲಾಗಿದೆ. ಇದರಿಂದ ಅಭಿವೃದ್ಧಿ ಪೂರಕವಾದ ಅಂಶಗಳು ಬೆಳಕಿಗೆ ಬರುತ್ತದೆ ಎಂದರು.ವಸ್ತುಸ್ಥಿತಿ ವರದಿಗೆ ಸಹಕಾರ ಅಗತ್ಯ: ಜಿಲ್ಲಾ ಮಾನವ ಅಭಿವೃದ್ಧಿ ವರದಿಗೆ ಅತ್ಯಂತ ಮಹತ್ವವಾದ ಮೌಲ್ಯವಿದೆ. ಇದು ದೀರ್ಘ, ಆರೋಗ್ಯಕರ ಮತ್ತು ಸೃಜನಾತ್ಮಕ ಜೀವನ ನಡೆಸಲು, ಶಿಕ್ಷಣ ಪಡೆಯಲು ಮತ್ತು ಯೋಗ್ಯ ಜೀವನ ಮಟ್ಟಕ್ಕೆ ಬೇಕಾದ ಸಂಪನ್ಮೂಲಗಳನ್ನು ಹೊಂದಲು ಅವಕಾಶ ನೀಡುತ್ತದೆ. ಹಾಗಾಗಿ ಅಧಿಕಾರಿಗಳು ತಾವು ತಯಾರಿಸುವ ವರದಿಯಿಂದ ಜಿಲ್ಲೆಯ ಅಭಿವೃದ್ಧಿ ಅವಲಂಬಿತವಾಗಿರುತ್ತದೆ. ವಸ್ತುಸ್ಥಿತಿ ವರದಿ ತಯಾರಿಕೆಗೆ ಅಧಿಕಾರಿಗಳ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಕರ್ನಾಟಕ ವಿಶ್ವವಿದ್ಯಾಲಯದ ಲೀಡ್ ಏಜೆನ್ಸಿ ಡಾ.ಜಗದ್ದೀಶ್, ಡಾ.ಕುಮಾರ್, ಜಿಲ್ಲಾ ಪಂಚಾಯತ್ ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾಧಿಕಾರಿ ರಾಘವೇಂದ್ರ ಕುಲಕರ್ಣಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

## ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮಾನ್ವಿ ತಾಲೂಕ ಘಟಕಕ್ಕೆ ಪ್ರಧಾನ ಕಾರ್ಯದರ್ಶಿಯಾಗಿ ಕೊಂಡಯ್ಯ ನಾಯಕ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ (ರಿ) ರಾಯಚೂರು ಬಿ. ರಾಮಣ್ಣ ನಾಯಕ ಜಿಲ್ಲಾಧ್ಯಕ್ಷರ ಆದೇಶದ ಮೇರೆಗೆ ಮಾನವಿ ತಾಲೂಕ ಘಟಕಕ್ಕೆ ತಾಲೂಕ ಪ್ರಧಾನ ಕಾರ್ಯದರ್ಶಿಯಾಗಿ ಕೊಂಡಯ್ಯ ನಾಯಕ ಬೆಳಗಿನಪೇಟೆ ಮಾನ್ವಿ ಇವರನ್ನು ತಾಲೂಕ ಪ್ರಧಾನ ಕಾರ್ಯದರ್ಶಿ ಎಂದು ನೇಮಕ ಮಾಡಿದ್ದು. ಕೂಡಲೇ ಸಂಘದ ಎಲ್ಲಾ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಶೈಕ್ಷಣಿಕ, ಆರ್ಥಿಕ, ಹಾಗೂ ಸಂಘಟನೆಯ ಬಲವರ್ಧನೆಗಾಗಿ ಶ್ರಮಿಸಲು ಈ ಮೂಲಕ ತಮಗೆ ಸೂಚಿಸಿ ಆದೇಶಿಸಿದೆ.ನಂತರ ತಾಲೂಕ ಪ್ರಧಾನ ಕಾರ್ಯದರ್ಶಿ ಯಾಗಿ ಆಯ್ಕೆಯಾದ ಕೊಂಡಯ್ಯ ನಾಯಕಗೆ ಅವರ ಅಭಿಮಾನಿ ಬಳಗ ಸನ್ಮಾನಿಸಿ ಗೌರವಸಿದರು.ಈ ಸಂದರ್ಭದಲ್ಲಿ ಗೋಪಾಲ ನಾಯಕ ಕರಡಿಗುಡ್ಡ,ನಾಯ್ಡು ನಾಯಕ,ವಿನೋದ ಕುಮಾರ, ಕೆ.ಸಾಜೀದ ಪಾಷ , ಬಸವರಾಜ ಸ್ವಾಮಿ, ಅಂಬು ನಾಯಕ, ಶಿವಾನಂದ ನಾಯಕ,ಯಲ್ಲಯ್ಯ ನಾಯಕ,ಶಂಕರ ನಾಯಕ,ದೇವರಾಜ ನಾಯಕ,ರಮೇಶ ನಾಯಕ, ಹನುಮೇಶ ನಾಯಕ,ಉಪೇಂದ್ರ ನಾಯಕ,ತಾಯಣ್ಣ ನಾಯಕ, ನರಸಿಂಹ ನಾಯಕ, ರಮೇಶ ನಾಯಕ,ಜಗದೀಶ, ಪಂಪಣ್ಣ ನಾಯಕ,ವಿರೇಶ ನಾಯಕ, ದೇವು ನಾಯಕ,ಮಂಜು ನಾಯಕ, ಈರಯ್ಯ ನಾಯಕ ಇತರರರು ಉಪಸ್ಥಿತರಿದ್ದರು.



# ಸರ್ಕಾರಿ ಯೂನಾನಿ ಆಸ್ಪತ್ರೆ ಆಯುಷ್ ಇಲಾಖೆಯಿಂದ ಕಾರುಣ್ಯಾಶ್ರಮದಲ್ಲಿ ಆರೋಗ್ಯ ತಪಾಸಣಾ ಶಿಬಿರ


ನೈಜ್ಯ ದೆಸೆ ನ್ಯೂಸ್




ಸಿಂಧನೂರು ---- ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಹತ್ತನೇ ವರ್ಷದ ರಾಷ್ಟ್ರೀಯ ಯುನಾನಿ ದಿನಾಚರಣೆಯ 2026ನೇ ವರ್ಷದ ಅಂಗವಾಗಿ ನಡೆಸುವ ಪೂರ್ವಭಾವಿ ಕಾರ್ಯಕ್ರಮಗನ್ನು ವೃದ್ಧಾಶ್ರಮಗಳಲ್ಲಿ ವಯೋವೃತ್ತರಿಗೆ ಆಹಾರ ಪದ್ಧತಿಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸರ್ಕಾರಿ ಯುನಾನಿ ಆಸ್ಪತ್ರೆ ಆಯುಷ್ ಇಲಾಖೆ ಸಿಂಧನೂರು ತಾಲೂಕ ಸಾರ್ವಜನಿಕ ಆಸ್ಪತ್ರೆಯ ವತಿಯಿಂದ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀ ಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ವೃದ್ಧರು ಹಾಗೂ ವಯಸ್ಕರ ಬುದ್ಧಿಮಾಂದ್ಯರಿಗೆ ಆರೋಗ್ಯ ತಪಾಸಣೆ ಮಾಡಿ ಔಷಧಿಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸರ್ಕಾರಿ ಯುನಾನಿ ಆಸ್ಪತ್ರೆ ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳಾದ ಡಾ. ಅಮ್ಜದ್ ಶರೀಫ್ ಮಾತನಾಡಿ ಆಯುರ್ವೇದ ಯೋಗ ಮತ್ತು ನೇಚರೋಪತಿ ಯುನಾನಿ ಸಿದ್ಧ ಹೋಮಿಯೋಪತಿಯೊಂದಿಗೆ ಕೂಡಿರುವುದೇ ಆಯುಷ್ ಇಲಾಖೆ ಈಗಿನ ವಾತಾವರಣದಲ್ಲಿ ವಯೋವೃದ್ದರೂ ಆಹಾರನ್ನು ಸೇವಿಸುವಾಗ ಹಲವಾರು ವಿಧಾನಗಳನ್ನು ಪಾಲಿಸಬೇಕು. ಮತ್ತು ಯೋಗ ಧ್ಯಾನ ಮಾಡುವುದರಿಂದ ತಮ್ಮ ಆರೋಗ್ಯದಲ್ಲಿ ಯಾವುದೇ ಕಾಯಿಲೆಗಳು ಕಂಡುಬರುವುದಿಲ್ಲ. ಈಗ ನಾವು ಕೊಡುತ್ತಿರುವ ಔಷಧಿ ಭೋಜನರ ನಂತರ ಅರ್ಧ ಚಮಚದಷ್ಟು ಸೇವಿಸಬೇಕು. ನಿತ್ಯ ನಿರಂತರವಾಗಿ ವ್ಯಾಯಾಮ ಮಾಡುವುದರ ಜೊತೆ ಬಿಸಿಲಿನ ವಾತಾವರಣದಲ್ಲಿ ಹೆಚ್ಚು ಸಮಯವನ್ನು ಕಳೆಯಬೇಕು. ತಮ್ಮಲ್ಲಿ ಯಾವುದೇ ಆರೋಗ್ಯದ ಸಮಸ್ಯೆಗಳಿದ್ದರೆ ಮುಂದಿನ ದಿನಮಾನಗಳಲ್ಲಿ ನಮ್ಮ ಇಲಾಖೆಯಿಂದ ನಿರಂತರವಾಗಿ ಸೇವೆ ಒದಗಿಸಲಾಗುತ್ತದೆ ಎಂದು ವೃದ್ಧರಲ್ಲಿ ಆರೋಗ್ಯದ ಬಗ್ಗೆ ಹಲವು ವಿಚಾರಗಳನ್ನು ಹಂಚಿಕೊಂಡರು. ನಂತರ ಇನ್ನೊರ್ವ ವೈದ್ಯಾಧಿಕಾರಿಗಳಾದ ಡಾ.ಫೌಜೀಯಾ ಬೇಗಂ ಮಾತನಾಡಿ ಈ ನಮ್ಮ ಕಾರುಣ್ಯಾಶ್ರಮದಲ್ಲಿರುವ ವಯೋವೃದ್ದರೂ ಎಲ್ಲರೂ ಆರೋಗ್ಯವಂತರಾಗಿರುವುದು ನಮಗೆ ತುಂಬಾ ಸಂತೋಷವಾಗಿದೆ. ತಾವುಗಳು ನಿರಂತರ ಬೆಳಗಿನ ಜಾವದಲ್ಲಿ ಬಿಸಿನೀರು ಸೇವಿಸುವುದರಿಂದ ಉತ್ತಮ ಆರೋಗ್ಯವಂತರಾಗಿರುತ್ತಿರಿ ಎಂದು ಮಾತನಾಡಿ ವೃದ್ಧರಲ್ಲಿ ಆತ್ಮಸ್ಥೈರ್ಯ ತುಂಬಿದರು. ಈ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ಅಮ್ಜದ್ ಶರೀಫ್. ಡಾ.ಫೌಜಿಯಾ ಬೇಗಂ. ಇವರುಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿದರು. ಈ ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆಯ ಫಾರ್ಮಸಿ ಅಧಿಕಾರಿಗಳಾದ ಭಾರ್ಗವ. ಸಿಬ್ಬಂದಿಗಳಾದ ವಿಶ್ವನಾಥ. ಕಲಾಧರ ಹಾಗೂ ಆಶ್ರಮದ ಕಾರ್ಯ ಅಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ. ಶ್ರೀ ಮಠ ಸೇವಾ ಟ್ರಸ್ಟ್ ನ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ ಅನೇಕರು ಉಪಸ್ಥಿತರಿದ್ದರು

# ಮಿಸ್ಟರ್ ರಾಯಚೂರು ಉತ್ಸವ -2026 ಕಿರೀಟ ಮುಡಿಗೇರಿಸಿಕೊಂಡ ಬೆಳಗಾವಿ ಜಿಲ್ಲೆಯ ಕುವರ ಪ್ರಶಾಂತ ಕನ್ನೂರಕರ

ನೈಜ್ಯ ದೆಸೆ ನ್ಯೂಸ್



ರಾಯಚೂರು ಜನವರಿ 29 (ಕರ್ನಾಟಕ ವಾರ್ತೆ):ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026 ನಿಮಿತ್ತ ಜನವರಿ 28ರಂದು ರಾಯಚೂರನಲ್ಲಿ ನಡೆದ ರಾಜ್ಯ ಮಟ್ಟದ ಪುರುಷರ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಬೆಳಗಾವಿ ಜಿಲ್ಲೆಯ ದೇಹದಾರ್ಢ್ಯ ಪಟು ಪ್ರಶಾಂತ ಕನ್ನೂರಕರ ಅವರು ಮಿಸ್ಟರ್ ರಾಯಚೂರು ಉತ್ಸವ-2026ರ ಕಿರೀಟವನ್ನು ಮುಡಿಗೇರಿಸಿಕೊಂಡರು.ಬೆಳಗಾವಿಯ ಮತ್ತೊಬ್ಬ ದೇಹದಾರ್ಢ್ಯ ಪಟು ಪ್ರತಾಪ ವಿಠ್ಠಲ್ ಕಲಕುಂದ್ರಿಕರ ಅವರು ರನರ್ ಆಫ್ ಆಗಿ ಹೊರಹೊಮ್ಮಿದರು.ರಾಯಚೂರಿನ ವೃಷಭ್ ವಶಿಷ್ಠ ಅವರು ಬೆಸ್ಟ್ ಫೋಜರ್ ಸ್ಥಾನಕ್ಕೆ ತೃಪ್ತಿಪಟ್ಟರು. ವಿಜೇತರಿಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ, ಮಹಾನಗರ ಪಾಲಿಕೆ ಕಮಿಷನರ್ ಜುಬಿನ್ ಮೋಹಪಾತ್ರ, ರಾಯಚೂರು ಜಿಲ್ಲಾ ದೇಹದಾರ್ಢ್ಯ ಸಂಘದ ಅಧ್ಯಕ್ಷರಾದ ಮಂಜುನಾಥ ಹಾನಗಲ್, ಸಂಘದ ಫೌಂಡರ್ ಹಾಗೂ ಕಾರ್ಯದರ್ಶಿ ಸುಧಾಕರ ಕುರುಡಿ ಅವರು ವಿಜೇತರಿಗೆ ಟ್ರಾಫಿ, ಮೆಡಲ್, ಪ್ರಮಾಣ ಪತ್ರ ಮತ್ತು ಕ್ರಮವಾಗಿ ಪ್ರಥಮ ಬಹುಮಾನ 30,000 ರೂ, ದ್ವಿತೀಯ ಬಹುಮಾನ 10,000 ರೂ ಹಾಗೂ ತೃತೀಯ ಬಹುಮಾನ 5000 ರೂ. ಗಳನ್ನು ನೀಡಿ ಸನ್ಮಾನಿಸಿ ಗೌರವಿಸಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಯಚೂರು ಜಿಲ್ಲಾ ದೇಹದಾರ್ಢ್ಯ ಸಂಘ ಹಾಗೂ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಗಳ ಸಹಯೋಗದಲ್ಲಿ ನಗರದ ಮಹಾತ್ಮ ಗಾಂಧೀ ಜಿಲ್ಲಾ ಕ್ರೀಡಾಂಗಣದಲ್ಲಿ ಈ ದೇಹದಾರ್ಢ್ಯ ಸ್ಪರ್ಧೆ ನಡೆಯಿತು.ಗಂಗಾಧರ ಎಂ., ಶಂಕರ ಪಿಲ್ಲೆ, ಮೈಬೂಬ್, ಸುಧಾಕರ, ಸುನೀಲ್ ರಾವುತ್,ಕಿರಣಕುಮಾರ, ಸಬರುದ್ದೀನ್ ಪಾಶಾ ಸೇರಿದಂತೆ ಇನ್ನಿತರರು ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು.55 ಕೆ.ಜಿ., 60 ಕೆ.ಜಿ.,65 ಕೆ.ಜಿ.,70 ಕೆ.ಜಿ., 75 ಕೆ.ಜಿ.,80 ಕೆ.ಜಿ. ಮತ್ತು 80+ ಕೆಜಿ ಸೇರಿದಂತೆ ಒಟ್ಟು ಏಳುವಿಭಾಗದಲ್ಲಿ ಸ್ಪರ್ಧೆ ನಡೆಯಿತು.ಪ್ರತಿ ವಿಭಾಗದಲ್ಲಿ ವಿಜೇತರಾದ ತಲಾ ಐದು ಸ್ಪರ್ಧಾಳುಗಳಿಗೆ ಕ್ರಮವಾಗಿ 15,000, 5000, 4000, 3000 ಮತ್ತು 2000 ರೂ ನಗದು ಬಹುಮಾನ, ಪ್ರಮಾಣ ಪತ್ರ ಮತ್ತು ಮೆಡಲ್ ನೀಡಿ ಸತ್ಕರಿಸಲಾಯಿತು.ಪೂರ್ಣಪಂದ್ಯ ವೀಕ್ಷಿಸಿದ ಜಿಲ್ಲಾಧಿಕಾರಿಗಳು, ಜಿಪಂ ಸಿಇಓ: ದೇಹದಾರ್ಢ್ಯ ಸ್ಪರ್ಧೆಯು ಜನವರಿ 28ರ ರಾತ್ರಿ 7.30ಕ್ಕೆ ಆರಂಭವಾಯಿತು.ಜಿಪಂ ಸಿಇಓ ಮಹಾನಗರ ಪಾಲಿಕೆಯ ಆಯುಕ್ತರು, ಅಪರ ಜಿಲ್ಲಾಧಿಕಾರಿಗಳು ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು, ಪಂದ್ಯ ವೀಕ್ಷಕರ ಸಾಲಿನಲ್ಲಿ ಕುಳಿತು ಪಂದ್ಯ ಆರಂಭದಿಂದ ರಾತ್ರಿ 10.30ರವರೆಗೆ ಸತತ 3 ಗಂಟೆ ಸಮಯ ದೇಹದಾರ್ಢ್ಯ ಸ್ಪರ್ಧೆಯ ವೀಕ್ಷಣೆ ನಡೆಸಿ ಸ್ಪರ್ಧಾಳುಗಳಿಗೆ ಹುರಿದುಂಬಿಸಿದರು.ರಾಯಚೂರು ಉತ್ಸವದ ಬಗ್ಗೆ ಸಲಹೆ ಕೇಳಲು ಜಿಲ್ಲಾಡಳಿತದಿಂದ ನಡೆಸಿದ ಸಂಘ ಸಂಸ್ಥೆಗಳ, ಗಣ್ಯರ, ನಾಗರಿಕರ, ಬುದ್ಧಿ ಜೀವಿಗಳ, ಸಾಹಿತಿಗಳ, ಕಲಾವಿದರ ಮೊದಲ ಸಭೆಯಲ್ಲಿ ಕೇಳಿ ಬಂದ ಸಲಹೆಯಂತೆ ನಾವು ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆ ಆಯೋಜನೆ ಮಾಡಿ ಕ್ರೀಡಾಸಕ್ತರಿಗೆ ಸ್ಪೂರ್ತಿ ನೀಡಿದ್ದೇವೆ ಎಂದು ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳು ಅಭಿಪ್ರಾಯ ಹಂಚಿಕೊಂಡರು.ಸಮಾರಂಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಡಿವೈಎಸ್ಪಿ ಶಾಂತವೀರ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ತಹಸೀಲ್ದಾರ ಸುರೇಶ ವರ್ಮಾ, ಅಮರೇಶ ಬಿರಾದಾರ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ, ಡಿಎಚ್ಒ ಡಾ.ಸುರೇಂದ್ರ ಬಾಬು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ವೀರೇಶ ನಾಯಕ ಸೇರಿದಂತೆ ಇನ್ನೀತರರು ಇದ್ದರು.ಡಾ.ದಂಡಪ್ಪ ಬಿರಾದಾರ ನಿರೂಪಿಸಿದರು.





# ರಘು ಭಾಂಡಗೆ ಮಗಳಾದ ಹಿರಾಲ್ ಅವರ ಜನ್ಮದಿನದಲ್ಲಿ ಕಾರುಣ್ಯಾಶ್ರಮಕ್ಕೆ ಐವತ್ತು ಸಾವಿರ ಧನ ಸಹಾಯ

**ನೈಜ್ಯ ದೆಸೆ ನ್ಯೂಸ್**

ಸಿಂಧನೂರು--- ನಗರದ ಬಸ್ ನಿಲ್ದಾಣದ ಎದುರುಗಡೆಯ ನೀವು ಭಾಂಡಗೆ ಜುವೆಲರ್ಸ್ ಮಾಲೀಕರಾದ ತೇಜಸ್ವಿನಿ ಭಾಂಡಗೆ ರಘು ಭಾಂಡಗೆ ಈ ದಂಪತಿಗಳ ಮಗಳಾದ ಹಿರಾಲ್ ಭಾಂಡಗೆ ಅವರ ದ್ವಿತೀಯ ವರ್ಷದ ಜನ್ಮದಿನವನ್ನು ನಗರದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸಿ ಆಶ್ರಮದ ನಿರ್ವಹಣೆಗಾಗಿ ಐವತ್ತು ಸಾವಿರ ರೂಪಾಯಿಗಳ ಧನ ಸಹಾಯ ಮಾಡುವುದರ ಮೂಲಕ ಸರಳವಾದ ಅರ್ಥಪೂರ್ಣ ಕಾರ್ಯಕ್ರಮ ನೆರವೇರಿತು. ಈ ಕಾರ್ಯಕ್ರಮದಲ್ಲಿ ತೇಜಸ್ವಿನಿ ಭಾಂಡಗೆ ರಘು ಭಾಂಡಗೆ ದಂಪತಿಗಳು ಹಾಗೂ ಹಿರಾಲ್ ಭಾಂಡಗೆ ಇವರುಗಳನ್ನು



ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ನಂತರ ರಘು ಭಾಂಡಗೆ ಮಾತನಾಡಿ ಕಾರುಣ್ಯ ಎನ್ನುವ ಕರುಣೆಯ ಆಶ್ರಮ ನೊಂದವರ ಬಾಳಿಗೆ ನಾಡಿಮಿಡಿತವಾಗಿ ಸುಮಾರು ವರ್ಷಗಳಿಂದ ಪ್ರಾಮಾಣಿಕವಾದ ಸೇವೆ ಸಲ್ಲಿಸುತ್ತಾ ನಾಡಿನ ಕರುಣೆಯ ಕುಟುಂಬವಾಗಿರುವುದು ಅದೆಷ್ಟೋ ಯುವಕರಿಗೆ ಸಾರ್ವಜನಿಕರಿಗೆ ಸ್ಫೂರ್ತಿಯಾಗಿದೆ. ನಾವು ಸಹಾಯ ಮಾಡಬಹುದು ಆದರೆ ನಿತ್ಯ ನಿರಂತರ ಇಲ್ಲಿರುವ ಎಲ್ಲಾ ಹಿರಿಯ ವೃದ್ಧರ ಹಾಗೂ ವಯಸ್ಕರ ಬುದ್ಧಿಮಾಂದ್ಯರನ್ನು ಸ್ವಂತ ಕುಟುಂಬದವರ ಹಾಗೆ ನೋಡಿಕೊಳ್ಳುತ್ತಿರುವ ಈ ಕಾರುಣ್ಯ ಕುಟುಂಬ ನಮ್ಮ ಸ್ವಂತ ಕುಟುಂಬದಂತಿದೆ. ನಮ್ಮ ಈ ಅಳಿಲು ಸೇವೆ ಕಾರುಣ್ಯ ಆಶ್ರಮದ ಕೂಸುಗಳ ಆಶೀರ್ವಾದ ಬಯಸಿದೆ. ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರವನ್ನು ಉಳಿಸುವಂತಹ ನಿಟ್ಟಿನಲ್ಲಿ ಕಾರುಣ್ಯ ಕುಟುಂಬದ ಸೇವೆ ಸಮಾಜಕ್ಕೆ ಅಪಾರವಾಗಿದೆ ಎಂದು ಮಾತನಾಡಿ 50 ಸಾವಿರ ರೂಪಾಯಿಗಳ ಚೆಕ್ ವಿತರಿಸಿ ಸೇವೆಗೆ ಪ್ರೋತ್ಸಾಹಿಸಿದರು. ಸೇವೆಯನ್ನು ಸ್ವೀಕರಿಸಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ಮಾತನಾಡಿ ನಮ್ಮ ರಘು ಭಾಂಡಗೆ ಅವರು ತಮ್ಮ ನೂತನ ಅಂಗಡಿ ಪ್ರಾರಂಭೋತ್ಸವದಲ್ಲಿಯೂ ಕೂಡ 50,000ಗಳನ್ನು ನೀಡುವುದರ ಮೂಲಕ ಕಾರುಣ್ಯ ಕುಟುಂಬದ ಕಷ್ಟವನ್ನು ನೀಗಿಸಿದ್ದರು. ಮತ್ತು ಇಂದು ತಮ್ಮ ಮಗಳಾದ ಹಿರಾಲ್ ಅವರ ಜನ್ಮದಿನವನ್ನು ಕೂಡ ಈ ರೀತಿ ಆಚರಣೆ ಮಾಡಿರುವುದು. ನಮಗೆ ಇನ್ನೂ ಹೆಚ್ಚಿನ ಸಾಮಾಜಿಕ ಸೇವೆ ಮಾಡಲು ಶಕ್ತಿ ಬಂದಂತಾಗಿದೆ. ಸಿಂಧನೂರಿನ ಭಾಂಡಗೆ ಕುಟುಂಬದ ಸೇವೆ ಕಾರುಣ್ಯ ಆಶ್ರಮಕ್ಕೆ ನಿರಂತರ ದೊರೆಯುತ್ತಿದ್ದು ಅವರ ಈ ಸೇವೆ ಭಗವಂತನ ಪೂಜೆಗಿಂತ ಮಿಗಿಲಾದುದು ಎಂದು ಮಾತನಾಡಿ ಭಾಂಡಗೆ ಕುಟುಂಬಕ್ಕೆ ಮತ್ತು ಈ ದಂಪತಿಗಳಿಗೆ ಶುಭ ಹಾರೈಸಿದರು.

# ಶ್ರೀ ಬಸವೇಶ್ವರ ಸಂಯುಕ ಪ್ರೌಢ ಶಾಲೆ ಹಳೆ ವಿದ್ಯಾರ್ಥಿ ಮೌನೇಶ್ ನಾಯಕ್ ರಾಷ್ಟ್ರ ಮಟ್ಟದ ಖೋ ಖೋ ಪಂದ್ಯಾವಳಿಗೆ ಆಯ್ಕೆ

**ನೈಜ್ಯ ದೆಸೆ ನ್ಯೂಸ್**

ಬಳಗಾನೂರು : ಜಿಲ್ಲೆಯ ಮಸ್ಕಿ ತಾಲ್ಲೂಕಿನ ಬಳಗಾನೂರ ಪಟ್ಟಣದ ಶ್ರೀಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ ಹಳೆ ವಿದ್ಯಾರ್ಥಿ "ಮೌನೇಶ ನಾಯಕ ತಂದಿ ನಾಗಪ್ಪ ನಾಯಕ ಕಾರಟಗಿ,, ರಾಷ್ಟ್ರ ಮಟ್ಟದ ಖೋ ಖೋ ಪಂದ್ಯಾವಳಿಗೆ ಆಯ್ಕೆ...ಕರ್ನಾಟಕ ರಾಜ್ಯ ಅಮೇಚೂರ್ ಖೋ ಖೋ ಅಸೋಸಿಯೆಷನ್ ಬೆಂಗಳೂರ ಸಂಸ್ಥೆ ವತಿಯಿಂದ ತುಮಕೂರ, ಬೆಂಗಳೂರು ನಲ್ಲಿ ದಿನಾಂಕ. ಜನೆವರಿ 31 ರಿಂದ ಪೆಬ್ರುವರಿ 3ರ ವರೆಗೆ ನಡೆಯುವ ರಾಷ್ಟ್ರ ಮಟ್ಟದ ಖೋ ಖೋ ಪಂದ್ಯಾಟಗಳಿಗೆ ಆಯ್ಕೆಯಾಗಿದ್ದಾನೆ..ಬಳಗನೂರಿನ ಶ್ರೀಬಸವೇಶ್ವರ ಸಂಯುಕ್ತ ಪ್ರೌಢ ಶಾಲೆ



ಹಾಗೂ ಬಳಗನೂರಿನ ಶ್ರೀಸಿದ್ದರಾಮೇಶ್ವರ ಪದವಿ ಪೂರ್ವ ಕಾಲೇಜ್ ನಲ್ಲಿ ವಿದ್ಯಾಭ್ಯಾಸ ಮಾಡಿ ಹೈ ಸ್ಕೂಲ್ ಮತ್ತು ಕಾಲೇಜ್ ಖೋ ಖೋ ಆಟದಲ್ಲಿ ಭಾಗವಹಿಸಿ ಶ್ರೀ ಬಸವರಾಜ ಯಾದಗಿರಿ ದೈಹಿಕ ಶಿಕ್ಷಕರು ಅವರಿಂದ ತರಬೇತಿಯನ್ನು ಪಡೆದು ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟ, ಮಿನಿ ಒಲಂಪಿಕ್ ಕ್ರೀಡಾಕೂಟ ಹಾಗೂ ಮೈಸೂರಿನಲ್ಲಿ ನಡೆದ ಮುಖ್ಯಮಂತ್ರಿ ಕಪ್,ಹಾಗೂ 2024ರಲ್ಲಿ ರಾಷ್ಟ್ರಮಟ್ಟದ 6ಜನ ಕ್ರೀಡಾಪಟುಗಳು ಆಡುವ ಅಲ್ಟಿಮೇಟ್ ಖೋ ಖೋ ಕ್ರೀಡಾಕೂಟದ ವರೆಗೂ ಆಡಿದ ಕ್ರೀಡಾಪಟುವಾಗಿದ್ದರು... ಇತ್ತೀಚಿಗೆ ನಡೆದ ಸೀನಿಯರ್ ರಾಜ್ಯ ಮಟ್ಟದ ಅಮೇಚೂರ್ ಖೋ ಖೋ ಚಾಂಪಿಯನ್ ಶಿಪ್ ನಲ್ಲಿ,,ರಾಜ್ಯ ಅಮೇಚೂರ್ ಖೋ ಖೋ ಅಸೋಸಿಯೆಷನ್ ಮಸ್ಕಿ ಸಂಸ್ಥೆಯ ಅಧ್ಯಕ್ಷರು ಮತ್ತು ಸರ್ವ ಸದಸ್ಯರ ತನು, ಮನ, ಧನದ ಸಹಕಾರ ಮತ್ತು ಪ್ರೋತ್ಸಾಹದಿಂದ ರಾಜ್ಯ ಮಟ್ಟದ ಚಾಂಪಿಯನ್ ಶಿಪ್ ನಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು, ರಾಷ್ಟ್ರ ಮಟ್ಟದ ಖೋ ಖೋ ಪಂದ್ಯಾವಳಿಗಳಿಗೆ ಆಯ್ಕೆಯಾಗಿ,,ಮಸ್ಕಿ ಅಮೇಚೂರ್ ಖೋ ಖೋ ಸಂಸ್ಥೆಯ ಮತ್ತು ತಂದೆ,ತಾಯಿಯ ಹಾಗೂ ಬಳಗನೂರಿನ ಕೀರ್ತಿಯನ್ನು ಹೆಚ್ಚಿಸಿದ್ದಾನೆ... ಈ ಕ್ರೀಡಾಪಟುವಿಗೆ ಊರಿನ ಗುರು ಹಿರಿಯರು ಹಾಗೂ ಸ್ನೇಹಿತರು ಕ್ರೀಡಾಭಿಮಾನಿಗಳು ಸಂತಸ ವ್ಯಕ್ತಪಡಿಸಿ ಈ ಕ್ರೀಡಾಪಟು ಇನ್ನು ಅಂತಾರಾಷ್ಟ್ರೀಯ ಮಟ್ಟದ ವರೆಗೂ ಬೆಳೆಯಲಿ ಎಂದು ಆಶೀಷಿ,,,ಅಭಿನಂದನೆಗಳು ತಿಳಿಸಿದ್ದಾರೆ...

## ಈರಣ್ಣ ಕ್ಯಾಂಪ್ ಸರ್ಕಾರಿ ಪ್ರಾಥಮಿಕ ಶಾಲೆ ಯಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಕಲಿಕಾ ಹಬ್ಬ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

ಸಿಂಧನೂರು : ತಾಲ್ಲೂಕಿನ ಈರಣ್ಣ ಕ್ಯಾಂಪ್ ಸರ್ಕಾರಿ ಪ್ರಾಥ–ಮಿಕ ಶಾಲೆ ಯಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಕಲಿಕಾ ಹಬ್ಬ ಕಾರ್ಯಕ್ರಮವು ದಿನಾಂಕ 29–01–2026 ರಂದು ಶಾಲಾ ಆವರಣದಲ್ಲಿ ವಿಜೃಂಭಣೆಯಿಂದ ಯಶಸ್ವಿಯಾಗಿ ನಡೆಯಿತು.ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ರಹಮತ್ ಪಾಷ ಅವರು,ಗ್ರಾಮ ಪಂಚಾಯತ್ ಅಧ್ಯಕ್ಷರು, ಆರ್.ಎಚ್. ನಂಬರ್–1, ನೆರವೇರಿಸಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷರು ವಹಿಸಿದ್ದರು.ಉದ್ಘಾಟನಾ ಭಾಷಣದಲ್ಲಿ ಶ್ರೀ ರಹಮತ್ ಪಾಷ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ,"ಶಿಸ್ತು ಮತ್ತು ಸಂಸ್ಕಾರವುಳ್ಳ ವಿದ್ಯಾವಂತರಾಗಿರಿ ಅಧ್ಯಕ್ಷ ರಹಮತ್ ಪಾಷ ಕಲಿಕಾ ಹಬ್ಬದಲ್ಲಿ ನಿಮ್ಮೆಲ್ಲರ ಉತ್ಸವಮಯ ಕಲಿಕಾ ಅನುಭವವನ್ನು ನೋಡುತ್ತಿದ್ದರೆ ನನಗೆ ಅಪಾರ ಸಂತೋಷವಾಗುತ್ತಿದೆ. ನಾವು ಓದುವ ಸಂದರ್ಭದಲ್ಲಿ ಈ ರೀತಿಯ ಚಟುವಟಿಕೆಗಳು ಬಹಳ ಕಡಿಮೆ ಇದ್ದವು. ಸರ್ಕಾರವು ನಿಮಗೆ ಒದಗಿಸುವ ಎಲ್ಲಾ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ನಿಷ್ಠಾವಂತ, ವಿದ್ಯಾವಂತ ನಾಗ–ರಿಕರಾಗಿರಿ ಹಾಗೂ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಳ್ಳಿ" ಎಂದು ಸಲಹೆ ನೀಡಿದರು.ಕಲಿಕಾ ಹಬ್ಬದ ಅಂಗವಾಗಿ ವಿದ್ಯಾರ್ಥಿಗಳಿಂದ ವಿವಿಧ ಸೃಜನಾತ್ಮಕ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಂಡವು. ಈ ಕಾರ್ಯಕ್ರಮವು ಮಕ್ಕಳಲ್ಲಿ ಕಲಿಕೆಯ ಮೇಲಿನ ಆಸಕ್ತಿ, ಆತ್ಮವಿಶ್ವಾಸ ಹಾಗೂ ಉತ್ಸಾಹವನ್ನು ಹೆಚ್ಚಿಸಿತು.ಕಾರ್ಯಕ್ರಮದಲ್ಲಿ ಶಿಕ್ಷಕರು, ಪಾಲಕರು, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಲಿಕಾ ಹಬ್ಬ ಕಾರ್ಯಕ್ರಮವು ಸೌಹಾರ್ದತೆಯೊಂದಿಗೆ ಯಶಸ್ವಿಯಾಗಿ ಮುಕ್ತಾಯವಾಯಿತು.





## ಅರಕೇರಾದಲ್ಲಿ ಫೆ.1ರಂದು ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಜ್ಯೋತಿ ರಥಯಾತ್ರೆ

**ನೈಜ್ಯ ದೆಸೆ ನ್ಯೂಸ್**

ಪಟ್ಟಣಕ್ಕೆ ಆಗಮಿಸಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಜ್ಯೋತಿ ರಥಯಾತ್ರೆಯನ್ನು ಅದ್ದೂ–ರಿಯಾಗಿ ಸ್ವಾಗತಿಸಲಾಗುವುದು ಎಂದು ತಹಸೀಲ್ದಾರ್ ಅಮರೇಶ ಬಿರಾದಾರ್ ತಿಳಿಸಿದರು. ಪಟ್ಟಣದ ತಹಸಿಲ್ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಫೆ.5 ರಿಂದ 7ರವರೆಗೆ ನಡೆಯಲಿರುವ



ರಾಯಚೂರು ಉತ್ಸವದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಐತಿಹಾಸಿಕ ಪರಂಪರೆ ಸೇರಿ ಮಕ್ಕಳಿಂದ ವೃದ್ಧರವರೆಗೆ ಮನೋಲ್ಲಾಸವಾಗುವ ಕಾರ್ಯಕ್ರಮಗಳು ನಡೆಯಲಿವೆ. ಇದರ ಅಂಗವಾಗಿ ಈಗಾಗಲೇ ಜಿಲ್ಲಾ ಕೇಂದ್ರದಲ್ಲಿ ವಿವಿಧ ಕ್ರೀಡಾಕೂಟಗಳು, ಮ್ಯಾರಥಾನ್ ಹಾಗೂ ಸ್ಪರ್ಧೆಗಳು ನಡೆಯುತ್ತಿವೆ.ಉತ್ಸವದ ಭಾಗವಾಗಿ ರಥಯಾತ್ರೆ ಫೆ.1ರಂದು ಸಂಜೆ 3.30ಕ್ಕೆ ಪಟ್ಟಣದ ಗ್ರಂಥಾಲಯದ ಬಳಿ ಸ್ವಾಗತಿಸಲ್ಪಡಲಿದ್ದು, ಗಾಂಧಿ ವೃತ್ತ ಮಾರ್ಗವಾಗಿ ಮಹರ್ಷಿ ವಾಲ್ಮೀಕಿ ವೃತ್ತದವರೆಗೆ ರಥಯಾತ್ರೆ ಸಾಗಲಿದೆ ಎಂದರು.ಈ ಹಿನ್ನೆಲೆಯಲ್ಲಿ ತಾಲೂಕಿನ ಮುಖಂಡರು, ಪ್ರಗತಿಪರ ಸಂಘಟನೆಗಳು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಸಹಕಾರಿ ಸಂಘ ಸಂಸ್ಥೆಗಳು, ಗ್ರಾಪಂ ಪ್ರತಿನಿಧಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾ–ರಿಗಳು ಹಾಗೂ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಥಯಾತ್ರೆ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

## ಸಾಹಿತ್ಯ ಸಿಂಚನ

ಬಿಂಬ – ಪ್ರತಿಬಿಂಬ.!

ನೇಗಿಲು ಹಿಡಿದು ನಿಂತ
ಪ್ರತಿ ರೈತನ ನಯನಗಳಲ್ಲಿ
ನನಗೆ ಅಮ್ಮ ಕಾಣುತ್ತಾಳೆ.!

ಬಂದೂಕು ಹಿಡಿದು ನಿಂತ
ಪ್ರತಿ ಯೋಧನ ಕಂಗಳಲ್ಲಿ
ನನಗೆ ಅಪ್ಪ ಕಾಣುತ್ತಾನೆ.!

ರೈತನ ನೇತ್ರದ ಅಂಗಳದಿ
ಕೈತುತ್ತಿನ ಬಟ್ಟಲು ಹಿಡಿದ
ಅಮ್ಮನ ಪ್ರೀತಿ ಕಾಣುತ್ತದೆ.!

ಯೋಧನ ಅಕ್ಷಿ ಬಾಂದಳದಿ
ನನ್ನ ಹೆಗಲ ಮೇಲೆ ಹೊತ್ತ
ಅಪ್ಪನ ವಾತ್ಸಲ್ಯ ಕಾಣುತ್ತದೆ.!

ಅನ್ನದಾತನ ಬೆವರಹನಿಗಳಲ್ಲಿ
ಅಮ್ಮನ ಕಕ್ಕುಲತೆ ಅಂತಃಕರಣ
ಅಲೆಗಳ ಭೋರ್ಗರೆತ ಕೇಳುತ್ತದೆ.!

ಸೈನಿಕನ ನೆತ್ತರ ಬಿಂದುಗಳಲ್ಲಿ
ಅಪ್ಪನ ಕಾಳಜಿ ಕಸುವುಗಳ
ಕಡಲಿನಾ ಮೊರೆತ ಕೇಳುತ್ತದೆ.!

ರೈತನ ಶ್ರಮ ಒಲುಮೆಗಳಲ್ಲಿ
ಅಮ್ಮನ ತ್ಯಾಗ ಮಮಕಾರಗಳ
ದೈವ ಕೊಳಲಿನಾ ಇನಿದನಿ.!

ಯೋಧನ ಕೆಚ್ಚು ದುಡಿಮೆಗಳಲ್ಲಿ
ಅಪ್ಪನಾ ನಿಸ್ವಾರ್ಥ ನಿಲುವುಗಳ
ಹೃದ್ಯವೀಣೆ ಸ್ವರಗಳ ಮಾರ್ದನಿ.!

ನನಗೆ ರೈತನೆಂದರೆ ಅಕ್ಷರಶಃ
ಅಮ್ಮನ ಒಡಲ ಮಮತೆ..
ಮಾತೃ ಜೀವದ ಭಾವದೊರತೆ.!

ನನಗೆ ಯೋಧನೆಂದರೆ ಅಕ್ಷರಶಃ
ಅಪ್ಪನ ಮಡಿಲ ಭದ್ರತೆ..
ಪಿತೃ ಜೀವದ ಭಾಷ್ಯಪ್ರಣತೆ.!

ಎ.ಎನ್.ರಮೇಶ್. ಗುಬ್ಬಿ.

## ಎಂಎಸ್‌ಪಿಎಲ್ ಕಾರ್ಖಾನೆ ವತಿಯಿಂದ ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಮಹತ್ವದ ಕೊಡುಗೆ

**ನೈಜ್ಯ ದೆಸೆ ನ್ಯೂಸ್**

ಕೊಪ್ಪಳ ಜಿಲ್ಲೆಯ ಬಸಾಪುರ ಗ್ರಾಮದಲ್ಲಿರುವ ಎಂಎಸ್‌ಪಿಎಲ್ ಕಾರ್ಖಾನೆ ವತಿಯಿಂದ ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದೆ. ಕಾರ್ಖಾನೆಯ ಸಿ.ಎಸ್.ಆರ್ ನಿಧಿಯಿಂದ ಸರ್ಕಾರಿ ಶಾಲೆಗೆ ಎರಡು ನೂತನ ಕೊಠಡಿಗಳನ್ನು ನಿರ್ಮಿಸಿ ಶಾಲೆಗೆ ಹಸ್ತಾಂತರಿಸಿದೆ.ನಿರ್ಮಾಣಗೊಂಡ ನೂತನ ಕೊಠಡಿಗಳ ಲೋಕಾರ್ಪಣೆಯನ್ನು ಶಿಕ್ಷಣ ಇಲಾಖೆ ಅಧಿಕಾರಿಗಳು ನೆರವೇ–ರಿಸಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು, ಗ್ರಾಮಸ್ಥರು ಹಾಗೂ ಕಾರ್ಖಾನೆ ಪ್ರತಿನಿಧಿಗಳು ಉಪಸ್ಥಿತರಿದ್ದರು.ಶಿಕ್ಷಣಕ್ಕೆ ಆದ–್ಯತೆ ನೀಡುವ ಉದ್ದೇಶದಿಂದ ಈ ಕೊಠಡಿಗಳನ್ನು ನಿರ್ಮಿಸಲಾಗಿದೆ ಎಂದು ಎಂಎಸ್‌ಪಿಎಲ್ ಸಂಸ್ಥೆ ತಿಳಿಸಿದೆ. ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿದ್ದ ಶಾಲೆಗೆ ಈ ನೂತನ ಕೊಠಡಿಗಳು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿವೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.ಗ್ರಾಮೀಣ ಶಿಕ್ಷಣದ ಅಭಿವೃದ್ಧಿಗೆ ಕೈಜೋಡಿಸಿರುವ ಎಂ–ಎಸ್‌ಪಿಎಲ್ ಕಾರ್ಖಾನೆಯ ಸಾಮಾಜಿಕ ಹೊಣೆಗಾರಿಕೆಯ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ
9902277588, 9880707587, 9008787586

# ಫೆ.1ಕ್ಕೆ ಶ್ರೀ ಸಿದ್ದರಾಮಾನಂದ ಮಹಾಸ್ವಾಮಿಗಳ ಪುಣ್ಯಾರಾಧನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿ

**ನೈಜ್ಯ ದೆಸೆ ನ್ಯೂಸ್**

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಾಖಾಮಠ ತಿಂಥಣಿ ಬ್ರಿಡ್ಜ್ ಪರಮಪೂಜ್ಯರಾದ ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮೀಜಿಯವರ ಪುಣ್ಯಾರಾಧನೆ ಕಾರ್ಯಕ್ರಮವು ಫೆಬ್ರವರಿ 1 ರಂದು ನಡೆಯಲಿದೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು, ಸಂಸದರು, ಶಾಸಕರು, ಮಠದ ಭಕ್ತರು, ಆಗಮಿಸಲಿದ್ದಾರೆಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಭೀಮಣ್ಣ ಹೇಳಿದರು.ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಕಾರ್ಯಕ್ರಮಕ್ಕೆ ಕಾಗಿನೆಲೆ ಗುರುಪೀಠದ ಜಗದ್ಗುರುಗಳು, ವಿವಿಧ ಮಠಗಳ ಮಠಾಧೀಶರು,ಪರಮಪೂಜ್ಯರು, ಸೇರಿ ಒಟ್ಟು 60 ಜನ ಮಠಾಧೀಶರು, ಜ.31ಕ್ಕೆ ಆಗಮಿಸಿ, ಶ್ರೀ ಸಿದ್ದರಾಮಾನಂದ ಮಹಾಸ್ವಾಮಿಗಳ ಸಮಾಧಿಯ ಬಳಿಯಲ್ಲಿ ವಿವಿಧ ಧಾರ್ಮಿಕ ವಿಧಿ–ವಿಧಾನದ




ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದಾರೆ.ನಂತರ ಪೂಜೆಯಲ್ಲಿ ಪಾಲ್ಗೊಂಡ ಎಲ್ಲಾ ಸ್ವಾಮೀಜಿಯವ–ರಿಗೆ ಸನ್ಮಾನಿಸಲಾಗುವುದು.ಫೆ.1ರಂದು ರಾಜ್ಯ ಕುರುಬರ ಸಂಘದ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳು, ಸಚಿವ ಸತೀಶ ಜಾರಕಿಹೊಳಿ, ಹಾಗೂ ಸಮಾಜದ ಹಿರಿಯರು, ಗುರುಗಳು, ಭಾಗವಹಿಸಲಿದ್ದಾರೆ. ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಅವರ ಮೇಲುಸ್ತುವಾರಿಯಲ್ಲಿ ಈ ಪುಣ್ಯಾರಾಧನೆ ಕಾರ್ಯಕ್ರಮ ನಡೆಯಲಿದೆ. ಸುಮಾರು 50 ರಿಂದ 60 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.ಈ ವೇಳೆ: ಕನಕ ಗುರುಪೀಠದ ತಾಲೂಕು ಅಧ್ಯಕ್ಷ ಅಮರೇಶಪ್ಪ ಮೈಲಾರ, ಕುರುಬ ಸಮಾಜದ ಮುಖಂಡರಾದ ಎಂ.ದೊಡ್ಡಬಸವರಾಜ, ಹಾಲುಮತ ಸಮಾಜದ ಉಪಾಧ್ಯಕ್ಷ ಮಲ್ಲಪ್ಪ ಮೈಲಾರ, ವರ್ತಕರ ಸಂಘದ ಕಾರ್ಯದರ್ಶಿ ಫಕೀರಪ್ಪ ತಿಡಿಗೋಳ, ಕಿಚ್ಚಾ ಸುರೇಶ, ಪಿಡಿಓ ಹುಚ್ಚಪ್ಪ ನೇಗಿಲಿ, ಟಿ.ಶಿವು, ನಾಗಪ್ಪ, ನಾಗರಾಜ ಬಾದರ್ಲಿ, ಬಸವರಾಜ ಗೊರೇಬಾಳ, ಸೇರಿದಂತೆ ಸಮಾಜದ ಅನೇಕ ಮುಖಂಡರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### BDS

BDS (ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ) ಎಂಬುದು 5 ವರ್ಷಗಳ (4 ವರ್ಷ ಓದು + 1 ವರ್ಷ ಇಂಟರ್ನ್‌ಶಿಪ್) ದಂತವೈದ್ಯಕೀಯ ಪದವಿ ಕೋರ್ಸ್ ಆಗಿದೆ. ಇದು 12ನೇ ತರಗತಿಯಲ್ಲಿ ವಿಜ್ಞಾನ (PCB) ವಿಷಯಗಳೊಂದಿಗೆ 50% ಅಂಕಗಳೊಂದಿಗೆ ಉತ್ತೀರ್ಣರಾದವರು, ಓಇಇಖ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ಪಡೆಯಬಹುದಾದ ಮುಖ್ಯ ಕೋರ್ಸ್ ಆಗಿದೆ. ಹಲ್ಲು ಮತ್ತು ಒಸಡುಗಳ ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗುತ್ತದೆ. ಬಿಡಿಎಸ್ (BDS) ಕೋರ್ಸ್ ವಿವರಗಳು:ಕೋರ್ಸ್ ಅವಧಿ: 5 ವರ್ಷಗಳು (4 ವರ್ಷಗಳ ಸೈದ್ಧಾಂತಿಕ/ಪ್ರಾಯೋಗಿಕ ಅಧ್ಯಯನ + 1 ವರ್ಷ ಕಡ್ಡಾಯ ತಿರುಗುವ ಇಂಟರ್ನ್‌ಶಿಪ್).ಅರ್ಹತೆ:10+2 ಅಥ–ವಾ ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ (Physics), ರಸಾಯನಶಾಸ್ತ್ರ **(Chemistry),** ಮತ್ತು ಜೀವಶಾಸ್ತ್ರ (Biology) ದೊಂದಿಗೆ ಉತ್ತೀರ್ಣರಾಗಿರಬೇಕು.ಕನಿಷ್ಠ 50% ಅಂಕಗಳನ್ನು **(SC/ST/OBC** ಅಭ್ಯರ್ಥಿಗಳಿಗೆ 40%) ಪಡೆದಿರಬೇಕು.ಅರ್ಜಿದಾರರ ಕನಿಷ್ಠ ವಯಸ್ಸು 17 ವರ್ಷಗಳಾಗಿರಬೇಕು.ಪ್ರವೇಶ ಪ್ರಕ್ರಿಯೆ: ಓಇಇಖ–ಗಲು (National Eligibility cum Entrance Test) ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಟ್–ಆಫ್ ಅಂಕಗಳನ್ನು ಪಡೆಯುವುದು ಕಡ್ಡಾಯ.ಪಠ್ಯಕ್ರಮ: ಮಾನವ ಅಂಗರಚನಾಶಾಸ್ತ್ರ, ದಂತ ವಸ್ತುಗಳು, ಪ್ರೋಸ್ಥೊಡಾಂಟಿ–ಕ್ಸ್, ಓರಲ್ ಪ್ಯಾಥಾಲಜಿ ಮತ್ತು ಮೈಕ್ರೋಬಯಾಲಜಿ, ಮತ್ತು ಜನರಲ್ ಮೆಡಿಸಿನ್ ಮುಂತಾದ ವಿಷಯಗಳನ್ನು ಒಳಗೊಂಡಿದೆ.ವೃತ್ತಿಜೀವನದ ಅವಕಾಶಗಳು:ದಂತ ಆಸ್ಪತ್ರೆಗಳಲ್ಲಿ (ಸರ್ಕಾರಿ/ಖಾಸಗಿ) ದಂತವೈದ್ಯರಾಗಿ ಕೆಲಸ ಮಾಡಬಹುದು.ಸ್ವಂತ ಕ್ಲಿನಿಕ್ ಪ್ರಾರಂಭಿಸಬಹುದು.ಒಆಖ **(Master of Dental Surgery)** ಮೂಲಕ ಉನ್ನತ ಶಿಕ್ಷಣ ಪಡೆಯಬಹುದು.ಡೆಂಟಲ್ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಬಹುದು.ಃಆಖ ಎಂಬುದು ಭಾರತದಲ್ಲಿ ಅನುಮೋದಿತ ವೃತ್ತಿಪರ ದಂತ ಕೋರ್ಸ್ ಆಗಿದೆ. MBBS ನಂತೆ, BDS ಕೂಡ ಬಾಯಿಯ ಆರೋಗ್ಯಕ್ಕೆ ಸಂಬಂಧಿಸಿದ ವಿಶೇಷ ವೈದ್ಯಕೀಯ ಶಿಕ್ಷಣವಾಗಿದೆ. ದಂತವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿಗಾಗಿ ಈ ಕೋರ್ಸ್ ಅನ್ನು ಆಯ್ಕೆ ಮಾಡಬಹುದು.

**ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

# ಭಾರತೀಯ ಪತ್ರಿಕೋದ್ಯಮ ದಿನ

ಭಾರತೀಯ ಪತ್ರಿಕೋದ್ಯಮ ದಿನವನ್ನು ಪ್ರತಿವರ್ಷ ಜನವರಿ 29ರಂದು ದೇಶಾದ್ಯಂತ ಆಚರಿಸಲಾಗುತ್ತದೆ. 1780ರ ಜನವರಿ 29ರಂದು ಜೇಮ್ಸ್ ಆಗಸ್ಟಸ್ ಹಿಕ್ಕಿ ಅವರು ಭಾರತದ ಮೊದಲ ಮುದ್ರಿತ ಪತ್ರಿಕೆಯಾದ "ಹಿಕ್ಕೀಸ್ ಬೆಂಗಾಲ್ ಗಜೆಟ್" ಅನ್ನು ಪ್ರಾರಂಭಿಸಿದರು. ಈ ದಿನದಿಂದಲೇ ಭಾರತದಲ್ಲಿ ಸಂಘಟಿತ ಪತ್ರಿಕೋದ್ಯಮಕ್ಕೆ ಚಾಲನೆ ದೊರಕಿತು. ಈ ಐತಿಹಾಸಿಕ ಘಟನೆಯನ್ನು ಸ್ಮರಿಸುವ ಸಲುವಾಗಿ ಭಾರತೀಯ ಪತ್ರಿಕೋದ್ಯಮ ದಿನವನ್ನು ಆಚರಿಸಲಾಗುತ್ತದೆ.ಪತ್ರಿಕೋದ್ಯಮವು ಕೇವಲ ಸುದ್ದಿ ನೀಡುವ ಸಾಧನವಲ್ಲ; ಅದು ಸಮಾಜವನ್ನು ಜಾಗೃತಗೊಳಿಸುವ ಶಕ್ತಿಯಾಗಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಗೆ ಪತ್ರಿಕೋದ್ಯಮವನ್ನು ನಾಲ್ಕನೇ ಕಂಬ ಎಂದು ಕರೆಯಲಾಗುತ್ತದೆ. ಇದು ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಜನರ ಸಮಸ್ಯೆಗಳು, ಹಕ್ಕುಗಳು ಮತ್ತು ಆಕಾಂಕ್ಷೆಗಳನ್ನು ಆಡಳಿತದ ಗಮನಕ್ಕೆ ತರುವ ಮಹತ್ತರ ಜವಾಬ್ದಾರಿಯನ್ನು ಪತ್ರಿಕೋದ್ಯಮ ಹೊತ್ತಿದೆ.ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೋದ್ಯಮದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಬಾಲಗಂಗಾಧರ ತಿಲಕ್ ಅವರ ಕೇಸರಿ, ಮಹಾತ್ಮ ಗಾಂಧೀಜಿ ಅವರ ಯಂಗ್ ಇಂಡಿಯಾ, ನವಜೀವನ, ಲಾಲಾ ಲಜಪತ್ ರಾಯ್ ಅವರ ಪಂಜಾಬ್ ಕೇಸರಿ ಮುಂತಾದ ಪತ್ರಿಕೆಗಳು ಜನರಲ್ಲಿ ರಾಷ್ಟ್ರಭಾವನೆ, ಧೈರ್ಯ ಮತ್ತು ಸ್ವಾತಂತ್ರ್ಯದ ಅರಿವು ಮೂಡಿಸಿದವು. ಬ್ರಿಟಿಷ್ ಆಡಳಿತದ ದಮನಕಾರಿ ನೀತಿಗಳ ವಿರುದ್ಧ ಜನರನ್ನು ಒಗ್ಗೂಡಿಸುವಲ್ಲಿ ಪತ್ರಿಕೋದ್ಯಮ ಪ್ರಮುಖ ಪಾತ್ರ ವಹಿಸಿತು.ಸ್ವಾತಂತ್ರ್ಯಾನಂತರವೂ ಪತ್ರಿಕೋದ್ಯಮವು ಸಮಾಜದ ದಾ–ರಿದೀಪವಾಗಿ ಕಾರ್ಯನಿರ್ವಹಿಸುತ್ತಿದೆ. ಭ್ರಷ್ಟಾಚಾರ, ಅನ್ಯಾಯ, ಅಸಮಾನತೆ, ಸಾಮಾಜಿಕ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತುವ ಮೂಲಕ ಜನರ ಹಿತವನ್ನು ಕಾಪಾಡುತ್ತಿದೆ. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಹಿಂದುಳಿದ ವರ್ಗಗಳ ಸಮಸ್ಯೆಗಳನ್ನು ಜನಮುಖ್ಯ ವಿಷಯಗಳನ್ನಾಗಿ ಮಾಡುತ್ತಿರುವುದು ಪತ್ರಿಕೋದ್ಯಮದ ಮಹತ್ವವನ್ನು ತೋರಿಸುತ್ತದೆ.ಇಂದಿನ ಡಿಜಿಟಲ್ ಯುಗದಲ್ಲಿ ಪತ್ರಿಕೋದ್ಯಮವು ಹೊಸ ರೂಪವನ್ನು ಪಡೆದಿದೆ. ಮುದ್ರಿತ ಪತ್ರಿಕೆಗಳ ಜೊತೆಗೆ ಟಿವಿ ಸುದ್ದಿ ವಾಹಿನಿಗಳು, ಆನ್‌ಲೈನ್ ಪೋರ್ಟಲ್‌ಗಳು ಮತ್ತು ಸಾಮಾಜಿಕ ಜಾಲತಾಣಗಳು ಸುದ್ದಿ ಪ್ರಸಾರದಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಸುದ್ದಿ ಕ್ಷಣಾರ್ಧದಲ್ಲಿ ಜಗತ್ತಿನ ಮೂಲೆಮೂಲೆಗೂ ತಲುಪುತ್ತಿದೆ. ಆದರೆ ಈ ವೇಗದ ಜೊತೆಗೆ ಸತ್ಯಾಸತ್ಯತೆ ಪರಿಶೀಲಿಸುವ ಹೊಣೆಗಾರಿಕೆಯೂ ಹೆಚ್ಚಾಗಿದೆ. ಸುಳ್ಳು ಸುದ್ದಿ ಮತ್ತು ವದಂತಿಗಳು ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡುವ ಸಾಧ್ಯತೆ ಇದೆ.ಆದ್ದರಿಂದ ಪತ್ರಿಕೋದ್ಯಮವು ಸದಾ ಸತ್ಯ, ನೈತಿಕತೆ, ನಿಷ್ಠೆ ಮತ್ತು ಜವಾಬ್ದಾರಿತನವನ್ನು ಪಾಲಿಸಬೇಕು. ಪತ್ರಕರ್ತರು ನಿರ್ಭಯವಾಗಿ ಸತ್ಯವನ್ನು ಹೇಳುವಾಗ ಸಮಾಜದ ಶಾಂತಿ ಮತ್ತು ಏಕತೆಯನ್ನು ಕಾಪಾಡುವ ಜಾಗೃತಿಯೂ ಅಗತ್ಯ. ಜನರ ವಿಶ್ವಾಸವೇ ಪತ್ರಿಕೋದ್ಯಮದ ಅತಿ–ದೊಡ್ಡ ಶಕ್ತಿ.ಭಾರತೀಯ ಪತ್ರಿಕೋದ್ಯಮ ದಿನವು ಪತ್ರಕರ್ತರ ಶ್ರಮ, ತ್ಯಾಗ ಮತ್ತು ಸಮಾಜದ ಮೇಲಿನ ಅವರ ಕರ್ತವ್ಯವನ್ನು ಗೌರವಿಸುವ ದಿನವಾಗಿದೆ. ಜೀವದ ಅಪಾಯವನ್ನು ಲೆಕ್ಕಿಸದೆ ಸತ್ಯಕ್ಕಾಗಿ ಹೋರಾಡುವ ಅನೇಕ ಪತ್ರಕರ್ತರ ಸೇವೆಯನ್ನು ಈ ದಿನ ಸ್ಮರಿಸಲಾಗುತ್ತದೆ.ಸಾರಾಂಶವಾಗಿ, ಭಾರತೀಯ ಪತ್ರಿಕೋದ್ಯಮವು ಸಮಾಜದ ಕಣ್ಣು, ಕಿವಿ ಮತ್ತು ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸತ್ಯದ ಮಾರ್ಗದಲ್ಲಿ ನಡೆಯುವ, ಜನರ ಹಕ್ಕುಗಳನ್ನು ರಕ್ಷಿಸುವ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವ ಪತ್ರಿಕೋದ್ಯಮವೇ ಶಕ್ತಿಶಾಲಿ ಭಾರತದ ಅಡಿಪಾಯವಾಗಿದೆ.

# ಸತ್ಯಾತ್ಮತೀರ್ಥರ ಶೋಭಾಯಾತ್ರೆ ಸಡಗರ

ನೈಜ್ಯ ದೆಸೆ ನ್ಯೂಸ್

ನಗರದ ವಿಶ್ವಮಧ್ವ ಮಹಾಪ–ರಿಷತ್‌ನ ಹರಿದಾಸ ಸಾಹಿತ್ಯ ಪ್ರಚಾರ ವಾಹಿನಿಯ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿರುವ ಉತ್ತರಾದಿಮಠದ ಮಠಾಧೀಶ ಸತ್ಯಾತ್ಮತೀಥ–ರ್ ಶ್ರೀಗಳನ್ನು ಬುಧವಾರ ಭವ್ಯ ಶೋಭಾಯಾತ್ರೆ ಮೂಲಕ ಸ್ವಾಗತಿಸಲಾಯಿತು.ಸತ್ಯಾತ್ಮತೀಥ–ರ್ರ ನೇತೃತ್ವದಲ್ಲಿ ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಆರಂಭವಾದ ದಾಸರ ಚಿತ್ರಗಳ ಮೆರವಣಿಗೆ ಬ್ರಹ್ಮಪುರದ ನೂತನ ವಿದ್ಯಾಲಯ ಸಂಸ್ಥೆಯ ಸತ್ಯಪ್ರಮೋದತೀಥ–ರ್ ಸಭಾಮಂಟಪದವರೆಗೂ ಸಾಗಿತು.ಉತ್ತರಾದಿ ಮಠದ ಮಠಾಧಿಕಾರಿ ರಾಮಾಚಾರ್ಯ ಘಂಟಿ, ಹರಿದಾಸ ಸಾಹಿತ್ಯಪ್ರಚಾರ ವಾಹಿನಿಯ ಅಧ್ಯಕ್ಷ ಪಂ. ಭೀಮಸೇನಾಚಾರ್ಯ ಜೋಶಿ, ಪಂ. ಅಭಯಾಚಾರ್ಯ ಪಾಟೀಲ, ಪಂ. ಗುರುಮಧ್ವಾಚಾರ್ಯ ನವಲಿ, ಪಂ. ಹಣಮಂತಾಚಾರ್ಯ ಸರಡಗಿ ಹಾಗೂ ನಗರದ ವಿವಿಧ ಮಹಿಳಾ ಭಜನಾಮಂಡಳಿಗಳ ಸದಸ್ಯೆಯರು ಪಾಲ್ಗೊಂಡಿದ್ದರು. ಮಹಿಳೆಯರು ಕೋಲಾಟ, ಗೋವಿಂದ ನಾಮಾವಳಿ ಪಠಿಸುತ್ತ ಶೋಭಾಯಾತ್ರೆಯಲ್ಲಿ ಸಾಗಿದ್ದು ಗಮನ ಸೆಳೆಯಿತು. ಸತ್ಯಾತ್ಮ ತೀರ್ಥರು ಐದು ದಿನಗಳ ಕಾಲ ಕಲಬುರಗಿ ನಗರದಲ್ಲಿ ತಂಗಲಿದ್ದಾರೆ.






OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101